<u>ದಿನಾಂಕ 02-02-2024 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>: ಪಾಟೀ ಸವಾಲುಃ ವಾದಿ ಪರ ಶ್ರೀ.ಬಿ ಎಸ್ ಡಿ ವಕೀಲರಿಂದ :</u>

ನಾನು ದ್ವಿತೀಯ ಪಿ ಯು ಸಿ ಓದಿದ್ದೇನೆ. ಜಮೀನಿನ ದಾಖಲೆಗಳಾದ ಉತಾರ, ಡ ನಂಬರು ಮತ್ತಿತರ ದಾಖಲೆಗಳನ್ನು ನೋಡಿ ಓದಿದರೆ ಅರ್ಥ ಆಗುತ್ತದೆ. ದಾವಾ ಎ ಶೆಡ್ಯೂಲ್ ರಿ.ಸ.ನಂ.251/1 ನಮ್ಮ ಕುಟುಂಬಕ್ಕೆ ನನ್ನ ಅಜ್ಜನ ಕಾಲದಿಂದ ಬಂದಿದೆ. ನನ್ನ ಅಜ್ಜನ ಹೆಸರು ವೀರಪ್ಪ ಗದಿಗೆಪ್ಪ ದೇವಸೂರ. ಅವರಿಗೆ ಹೇಗೆ ಬಂತು ಎಂದರೆ ಮೂಲತಃ ಆ ಜಮೀನು ದೇವಸೂರ ಮನೆತನಕ್ಕೆ ಸೇರಿದ್ದಾಗಿದೆ. ನಮ್ಮ ಊರಿನಲ್ಲಿ ದೇವಸೂರ ಮನೆತನಕ್ಕೆ ಸೇರಿದ 3 ರಿಂದ 4 ಮನೆಗಳು ಇವೆ. ಆ 3 ರಿಂದ 4 ಮನೆಗಳು ಮೂಲತಃ ಒಂದೇ ಮನೆತನಕ್ಕೆ ಸೇರಿದ್ದಾಗಿವೆ. ದಾವಾ ಎ ಶೆಡ್ಯೂಲ ನಿಮ್ಮ ಅಜ್ಜನಿಗೆ ಯಾವ ದಾಖಲೆಯ ಮೂಲಕ ಬಂತು ಎಂದರೆ ಆ ಜಮೀನಿನ ಬಗ್ಗೆ ಮೊದಲು ನನ್ನ ಅಜ್ಜನ ಹೆಸರೇ ದಾಖಲಾಗಿದೆ. ಆ ದಾಖಲೆಯನ್ನು ನೋಡಿದ್ದೀರಾ ಎಂದರೆ ನೋಡಿದ್ದೇನೆ, ಡ ನಂಬರು ಗೊತ್ತಿಲ್ಲ. ದಾಖಲೆಯನ್ನು ತೋರಿಸಿದರೆ ನೋಡಿ ಹೇಳುತ್ತೇನೆ. ಸಾಕ್ಷಿಗೆ ನಿ ಪಿ 11 ರ ದಾಖಲೆಯನ್ನು ತೋರಿಸಲಾಗಿ ಆ ದಾಖಲೆಯೇ ನನ್ನ ಅಜ್ಜನ ದಾಖಲೆಯಾಗಿದೆ ಎಂದು ನುಡಿಯುತ್ತಾರೆ. ನಿ ಪಿ 11 ರ ಪ್ರಕಾರ ಗಣೇಶಪ್ಪ ಮತ್ತು ಶಿದ್ದವೀರಪ್ಪ ತಂದೆ ಹುಚ್ಚಪ್ಪ ದೇವಸೂರ, ಬಸವಣ್ಣೆವ್ವ ಕೋಂ ವಿರೂಪಾಕ್ಷಪ್ಪ ದೇವಸೂರ, ನಿಸ್ಸೀಮಪ್ಪ ಗುರುಪಾದಪ್ಪ ದೇವಸೂರ, ವೀರಪ್ಪ ಗದಿಗೆಪ್ಪ ದೇವಸೂರ, ಬಸವಣ್ಣೆವ್ವ, ನಿಸ್ಸೀಮಪ್ಪ, ವೀರಪ್ಪ ದೇವಸೂರ, ಶಿವಲಿಂಗಪ್ಪ ಶಿದ್ಧಲಿಂಗಪ್ಪ ಗುಡಿ ಎಂಬುವವರು ವಾಟ್ನಿ ಮಾಡಿಕೊಂಡಿದ್ದಾರೆ ಎಂದರೆ ಸರಿ. ಸದರಿ ವಾಟ್ನಿಗೂ ಪೂರ್ವದಲ್ಲಿ ಆ ಜಮೀನುಗಳು ವಿರೂಪಾಕ್ಷಪ್ಪ ಗದಿಗೆಪ್ಪ ದೇವಸೂರ ರವರ ಹೆಸರಿನಲ್ಲಿ ಇತ್ತು ಎಂದರೆ ಇರಬಹುದು. ಆ ಸಂಬಂಧ ನಿ ಪಿ 10 ರಂತೆ ಡ ನಂಬರು 1514 ಮಂಜೂರಾಗಿದೆ ಎಂದರೆ ಇರಬಹುದು. ಅದಕ್ಕೂ ಪೂರ್ವದಲ್ಲಿ 1933 ರಲ್ಲಿ ಆ ಜಮೀನು ಗದಿಗೆಪ್ಪ ಬಿನ್ ಶಿದ್ಧವೀರಪ್ಪ ದೇವಸೂರ ರವರ ಹೆಸರಿನಲ್ಲಿ ಇತ್ತು ಎಂದರೆ ಇರಬಹುದು. ಆ ಬಗ್ಗೆ ನಿ ಪಿ 9 ರಂತೆ ಡ ನಂ. 242 ಮಂಜೂರಾಗಿದೆ ಎಂದರೆ ಸರಿ. ದಾವಾ ಎ ಶೆಡ್ಯೂಲ್ ಜಮೀನು ನನ್ನ ತಂದೆಗೆ ಪಿತ್ರಾರ್ಜಿತವಾಗಿ ಬಂದ ಜಮೀನು ಎಂದರೆ ಸರಿ.

2. ಆ ಜಮೀನಿನ ಪಕ್ಕದಲ್ಲಿ ಜಗದೀಶ ಶಿದ್ಧಪ್ಪ ಬೊಮ್ಮೋಜಿರವರ ಜಮೀನು ಬರುತ್ತದೆಯೇ ಎಂದರೆ ಅವರು ನಮ್ಮ ಜಮೀನನ್ನು ಖರೀದಿಗೆ ತೆಗೆದುಕೊಂಡಿದ್ದಾರೆ. ಅದನ್ನು ಯಾರು ಖರೀದಿಗೆ ಕೊಟ್ಟಿದ್ದಾರೆ ಎಂದರೆ ವೀರಪ್ಪ ಗದಿಗೆಪ್ಪ ದೇವಸೂರು ಕೊಟ್ಟಿದ್ದಾರೆ. ಅವರು ನನ್ನ ತಂದೆಯ ತಂದೆ ಎಂದರೆ ಸರಿ. ಆ ಜಮೀನಿನ ಬಗ್ಗೆ ನನ್ನ ತಂದೆ ಬದುಕಿದ್ದಾಗಲೇ ನಮ್ಮ ಮತ್ತು ಜಗದೀಶ ಶಿದ್ಧಪ್ಪ ಬೊಮ್ಮೋಜಿರವರ ಮಧ್ಯ ಒಂದು ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ಸಾಕ್ಷಿಗೆ ಅಸಲು ದಾವೆ ಸಂಖ್ಯೆ **82/2020** ರ ವಾದಪತ್ರದ ದೃಢೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ಅದನ್ನು ಒಪ್ಪಿಕೊಂಡಿದ್ದು ಅದನ್ನು ನಿ ಪಿ **26** ಎಂದು ಗುರುತಿಸಲಾಯಿತು. ನನ್ನ ತಂದೆ ಬದುಕಿಲ್ಲ. ನನ್ನ ತಂದೆಯ ಮರಣಾನಂತರ ಆ ದಾವೆಯಲ್ಲಿ ನನ್ನ ತಂದೆಯ ವಾರಸುದಾರರಾದ ನಾವು ಪಕ್ಷಗಾರರಾಗಿ ದಾವೆಯನ್ನು ಮುಂದುವರೆಸಿದೆವು ಎಂದರೆ ಸರಿ. ಆ ರೀತಿ ನಾವು ಆ ದಾವೆಯಲ್ಲಿ ಸೇರ್ಪಡೆಗೊಂಡ ನಂತರ ವಾದ ಪತ್ರವನ್ನು ತಿದ್ದುಪಡಿ ಮಾಡಿದ್ದು ಈಗ ನೋಡುತ್ತಿರುವ ದಾಖಲೆ ಸದರಿ ದಾವೆಯ ತಿದ್ದುಪಡಿ ವಾದಪತ್ರದ ದೃಢೀಕೃತ ನಕಲು ಎಂದರೆ ಸರಿ. ಸದರಿ ದಾಖಲೆಯನ್ನು ನಿ ಪಿ 27 ಎಂದು ಗುರುತಿಸಲಾಯಿತು.

3. ದಾವಾ ಎ ಶೆಡ್ಯೂಲ್ ಜಮೀನನ್ನು ನನ್ನ ತಂದೆ ಇದ್ದಾಗ ಅವರು ಸಾಗುವಳಿ ಮಾಡುತ್ತಿದ್ದರು ಮತ್ತು ಅವರ ನಂತರ ನಾನು ಸಾಗುವಳಿ ಮಾಡುತ್ತಿದ್ದೇನೆ ಎಂದರೆ ಬೇರೆ ಬೇರೆಯಾಗಿಯೇ ಸಾಗುವಳಿ ಮಾಡುತ್ತಿದ್ದೇವೆ. ದಾವಾ ಎ ಶೆಡ್ಯೂಲನ ಉತಾರೆಯಲ್ಲಿ ಎಲ್ಲರ ಹೆಸರು ಸಾಮೂಹಿಕವಾಗಿ ಬರುತ್ತದೆ. ಬೇರೆ ಬೇರೆ ಸಾಗುವಳಿ ಮಾಡುತ್ತಿದ್ದೇವೆ ಎಂಬ ಬಗ್ಗೆ ಹಿಸ್ಸೆ ಮಾಡಿಕೊಂಡಿದ್ದೀರಾ ಎಂದರೆ ಇಲ್ಲ, ತಂದೆ ಆಪಸಾತಿನಲ್ಲಿ ಹೇಳಿದ್ದರು. ದಾವಾ ಎ ಶೆಡ್ಯೂಲ ಜಮೀನು ಮಾತ್ರ ನನ್ನ ತಂದೆಗೆ ಇದ್ದ ಒಂದೇ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ, ಅದರ ಜೊತೆಗೆ ಒಂದು ಮನೆಯೂ ಇದೆ. ನನ್ನ ತಂದೆಗೆ ಮೂಲತಃ ದಾವಾ ಎ ಶೆಡ್ಯೂಲ್ ಜಮೀನು ಮಾತ್ರ ಆದಾಯದ ಮೂಲವಾಗಿತ್ತು ಎಂದರೆ ಸರಿ. ವಾದಿ ನನ್ನ ತಂದೆಯ ಹಿರಿಯ ಮಗ. ವಾದಿ ಹುಟ್ಟುವವರೆಗೆ ನಮ್ಮ ಕುಟುಂಬದಲ್ಲಿ ನನ್ನ ತಂದೆ ಮತ್ತು ತಾಯಿ ಮಾತ್ರ ಸದಸ್ಯರಿದ್ದರು ಎಂದರೆ ಅಜ್ಜಿ ಕೂಡ ಇದ್ದರು. ಅಜ್ಜಿ ಎಂದರೆ ನನ್ನ ತಂದೆಯ ಕಡೆಯಿಂದ ಅಜ್ಜಿ. ಅವರು ಈಗ ತೀರಿಕೊಂಡಿದ್ದಾರೆ. ಅವರ ಹೆಸರು ಬಸವಣ್ಣೆವ್ವ ವೀರಪ್ಪ ದೇವಸೂರು. ಅವರು ತೀರಿಕೊಂಡು ಸುಮರು **8-9** ವರ್ಷಕ್ಕೂ ಮೇಲಾಯಿತು.

**4.** ವಾದಿ ನಮ್ಮ ಊರಿನ ಶಾಲೆಯಲ್ಲಿಯೇ ಓದಿದ್ದಾರೆ. ವಾದಿಯ ಜನ್ಮ ದಿನಾಂಕ **7-3-1977.** ವಾದಿ ಶಾಲೆಗೆ ಮನೆಯಿಂದಲೇ ಓಡಾಡುತ್ತಿದ್ದರು. ವಾದಿಯನ್ನು ಶಾಲೆಗೆ ನನ್ನ ತಂದೆ ದಾಖಲಿಸಿರಬಹುದು. ನನ್ನ ಜನ್ಮ ದಿನಾಂಕ ಶಾಲಾ ದಾಖಲೆಗಳಲ್ಲಿ **7-3-1977** ಎಂದು ದಾಖಲಾಗಿದೆ. ನನಗೂ ವಾದಿಗೂ ಒಂದು ವರ್ಷದ ಅಂತರ ಇದೆ. ನನ್ನ ನಿಖರವಾದ ಜನ್ಮ ದಿನಾಂಕ **28-5-1978.** ಆ ತಾರೀಖು ನನ್ನ ಜಾತಕದಲ್ಲಿ ಇದೆ. ಜಾತಕ ನನ್ನ ಬಳಿ ಇದೆ. ನಾನು **1** ನೇ ತರಗತಿಯಿಂದ ನಮ್ಮ ಊರಿನ ಕನ್ನಡ ಶಾಲೆಯಲ್ಲಿಯೇ ಓದಿದ್ದೇನೆ. ನಾನು ಮನೆಯಿಂದಲೇ ಶಾಲೆಗೆ ಹೋಗಿ ಬಂದು ಮಾಡುತ್ತಿದ್ದೆ. ನನ್ನನ್ನು ಶಾಲೆಗೆ ತಂದೆ ತಾಯಿ ದಾಖಲಿಸಿದ್ದಾರೆ. ನನ್ನ ಓದಿನ ಖರ್ಚನ್ನು ನನ್ನ ತಂದೆ ತಾಯಿ ನೋಡಿಕೊಳ್ಳುತ್ತಿದ್ದರು. ನಾನು ಕೂಸನೂರು ಕನ್ನಡ ಶಾಲೆಯಲ್ಲಿ **7** ನೇ ತರಗತಿಯವರೆಗೆ ಓದಿದ್ದೇನೆ. ನಾನು ಕೂಸನೂರಿನಲ್ಲಿಯೇ ಪ್ರೌಢಶಾಲೆಗೆ ಸೇರಿದ್ದೇನೆ. ನಾನು ಕೂಸನೂರಿನ ಪ್ರಭುಕುಮಾರ ಪ್ರೌಢಶಾಲೆಯಲ್ಲಿ ಓದುತ್ತಿರುವಾಗಲೂ ಸಹ ಮನೆಯಿಂದಲೇ ಶಾಲೆಗೆ ಓಡಾಡುತ್ತಿದ್ದೆ. ನನ್ನ ಪ್ರೌಢಶಾಲೆಯ ವಿದ್ಯಾಭ್ಯಾಸದ ಖರ್ಚು ವೆಚ್ಚಗಳನ್ನು ನನ್ನ ತಂದೆಯೇ ನೋಡಿಕೊಳ್ಳುತ್ತಿದ್ದರು. ನನ್ನ ಮತ್ತು ವಾದಿಯ ವಿದ್ಯಾಭ್ಯಾಸದ ಖರ್ಚು ವೆಚ್ಚಗಳ ಬಗ್ಗೆ ನನ್ನ ತಂದೆಗೆ ಆದಾಯದ ಮೂಲ ದಾವಾ ಎ ಶೆಡ್ಯೂಲ್ ಜಮೀನು ಮಾತ್ರ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದರೊಂದಿಗೆ ನನ್ನ ತಂದೆ **5-6** ಜಮೀನುಗಳನ್ನು ಲಾವಣಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ **5-6** ಜಮೀನುಗಳನ್ನು ಲಾವಣಿ ಮಾಡಲು ಬೇಕಾದ ಖರ್ಚನ್ನು ದಾವಾ ಎ ಶೆಡ್ಯೂಲ್ ಜಮೀನಿನ ಆದಾಯದಿಂದಲೇ ತೆಗೆಯುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಮಾವ ಸ್ಥಿತಿವಂತರಿದ್ದು ನನ್ನ ತಂದೆ ಅವರಿಂದ ಹಣ ಪಡೆಯುತ್ತಿದ್ದರು. ಸಾಕ್ಷಿ ಮುಂದುವರೆದು ಕೆಲವೊಂದು ಬಾರಿ ನಮ್ಮ ಓದಿಗೆ ಮಾವ ಸಹಾಯ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಆ ಹಣ ನಿಮ್ಮ ಮಾವ ಯಾವ ಖಾತೆಯ ಮೂಲಕ ಪಾವತಿಸುತ್ತಿದ್ದರು ಎಂದರೆ ಖಾತೆಯ ಮೂಲಕ ಪಾವತಿಸುತ್ತಿರಲಿಲ್ಲ, ರಜಾ ದಿನಗಳಂದು ನನ್ನ ತಾಯಿ ಕೊಯಿಮತ್ತೂರಿಗೆ ಹೋಗುತ್ತಿದ್ದಾಗ ಅವರು ಹಣ ಕೊಡುತ್ತಿದ್ದರು. ಮಾವ ನಮ್ಮ ವಿದ್ಯಾಭ್ಯಾಸಕ್ಕೆ ಹಣ ಕೊಟ್ಟ ಬಗ್ಗೆ ಇಲ್ಲಿಯವರೆಗೆ ನನಗೆ ಯಾವುದೇ ದಾಖಲೆ ಸಿಕ್ಕಿಲ್ಲ. ನನ್ನ ಮಾವನಾದ ಎಮ್ ಆರ್ ಶೆಟ್ಟರು ನಮಗೆ ಯಾವುದೇ ರೀತಿಯಲ್ಲಿ ಆರ್ಥಿಕ ಸಹಾಯ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**
ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್